1) ಸಂತಾಪ ಸೂಚನೆ

ವಿಷಯ :- ಕಾರ್ಗಿಲ್‌ನಲ್ಲಿ ಮಡಿದ ವೀರ ಯೋಧರಿಗೆ ಶ್ರದ್ಧಾಂಜಲಿ

ಅಧ್ಯಕ್ಷರು : ಗೌರವಾನ್ವಿತ ಸದಸ್ಯರೇ, ಭಾರತದೇಶದ ಕಾರ್ಗಿಲ್ ಗಡಿಪ್ರದೇಶದಲ್ಲಿ ಉದ್ಭವವಾಗಿರುವ ಪರಿಸ್ಥಿತಿ ತಮಗೆಲ್ಲರಿಗೂ ಗೊತ್ತಿದೆ. ತಾಯ್ನಾಡಿನ ಪವಿತ್ರ ಭೂಮಿಯ ರಕ್ಷಣೆಗಾಗಿ ನಮ್ಮ ಯೋಧರು ತ್ಯಾಗಶೀಲ ಮನೋಭಾವನೆಯಿಂದ, ಅರ್ಪಣ ಮನೋಭಾವನೆಯಿಂದ ಹೋರಾಟ ಮಾಡುತ್ತಿದ್ದಾರೆ. ಅನೇಕ ಜನ ವೀರ ಯೋಧರು ತಮ್ಮ ಜೀವವನ್ನು ತ್ಯಾಗ ಮಾಡಿ ಈ ಪವಿತ್ರ ಭೂಮಿಯ ರಕ್ಷಣೆಗಾಗಿ ತಮ್ಮ ಕಾಣಿಕೆಯನ್ನು ಕೊಟ್ಟು ಹೋಗಿದ್ದಾರೆ. ಈ ರಾಷ್ಟ್ರದ ಒಂದು ಅವಿಭಾಜ್ಯ ಅಂಗವಾದ ಈ ಶಾಸನಸಭೆಯು ಕರ್ನಾಟಕ ರಾಜ್ಯದ ಎಲ್ಲಾ ಜನತೆಯ ಪರವಾಗಿ, ನಮ್ಮ ಪವಿತ್ರ ಭೂಮಿಯ ರಕ್ಷಣೆಗಾಗಿ ತಮ್ಮ ಜೀವ ತ್ಯಾಗ ಮಾಡಿದಂಥ ಆ ವೀರ ಯೋಧರಿಗೆ ನಮನ ಸಲ್ಲಿಸುವುದು ನಮ್ಮ ಆದ್ಯ ಕರ್ತವ್ಯ. ಅದರ ಜೊತೆ ಜೊತೆಗೆ ಈ ಜೀವ ತ್ಯಾಗದಿಂದ ನಷ್ಟವನ್ನು ಅನುಭವಿಸಿರುವ ಕುಟುಂಬಗಳು ಯಾವುವು ಇದ್ದಾವೆ, ಅವರಿಗೆ ನಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸತಕ್ಕಂಥದ್ದು, ಅವರ ಜೊತೆಗೆ ನಿಲ್ಲತಕ್ಕದ್ದು ನಮ್ಮ ಆದ್ಯ ಕರ್ತವ್ಯವೆಂದು ತಮಗೆ ನೆನಪಿಸುವುದಕ್ಕೆ ನಾನು ಇಷ್ಟಪಡುತ್ತಿದ್ದೇನೆ. ಈ ದಿವಸದ ಕಾರ್ಯಕಲಾಪದಲ್ಲಿ ಮೊದಲನೆ ಕಾರ್ಯಕ್ರಮ ನಾವು ಈ ಹೋರಾಟದಲ್ಲಿ ನಮಗಾಗಿ ತಮ್ಮ ಪ್ರಾಣತ್ಯಾಗ ಮಾಡಿದ ವೀರ ಯೋಧರಿಗೆ ನಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸುವುದು ಮತ್ತು ಈ ಅಧ್ಯಕ್ಷಪೀಠದ ಮುಖಾಂತರ ಎಲ್ಲಾ ಸದಸ್ಯರಲ್ಲಿ ನಾನು ಅತ್ಯಂತ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಮ್ಮ ಕಿರುಕಾಣಿಕೆಯಾಗಿ ಈ ಸದನದ ಎಲ್ಲಾ ಗೌರವಾನ್ವಿತ ಸದಸ್ಯರು ತಮ್ಮ ಒಂದು ತಿಂಗಳ ವೇತನವನ್ನು ಸಂತೋಷದಿಂದ, ಭಕ್ತಿಗೌರವಗಳಿಂದ ಈ ವೀರಯೋಧರ ಕುಟುಂಬಗಳ ಪುನರ್ವಸತಿ ಕಲ್ಯಾಣ ಕಾರ್ಯಕ್ರಮಕ್ಕಾಗಿ ದೇಣಿಗೆಯಾಗಿ ಕೊಡೋಣ ಎನ್ನುವ ಮಾತನ್ನು ಹೇಳುತ್ತೇನೆ. ಈ ನಿಟ್ಟಿನಲ್ಲಿ ತಾವೆಲ್ಲರೂ ನನ್ನೊಡನೆ ಸಹಕರಿಸಿ ಎದ್ದುನಿಂತು ಇವರ ಕುಟುಂಬಗಳಿಗೆ ಗೌರವ ಸೂಚಿಸಲು, ವೀರಯೋಧರಿಗೆ ಗೌರವ ಸೂಚಿಸಲು ಶ್ರದ್ಧಾಂಜಲಿಯನ್ನು ಅರ್ಪಿಸೋಣ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(ಈ ಸಂದರ್ಭದಲ್ಲಿ ಸದನವು ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಿತು)

ಕಳೆದ ಅಧಿವೇಶನದಿಂದ ಇಲ್ಲಿಯವರೆಗೆ ಮಧ್ಯಾವಧಿಯಲ್ಲಿ ನಮ್ಮನ್ನು ಅಗಲಿ ಹೋದ ಅನೇಕ ಜನ ಮಾಜಿ ಶಾಸಕರು ಮತ್ತು ಇನ್ನಿತರ ಗಣ್ಯರಿಗೆ ಕಾರ್ಯಕ್ರಮದ ಪಟ್ಟಿಯಪ್ರಕಾರ ಅವರಿಗೆ ಸಲ್ಲಿಸುವ ಶ್ರದ್ಧಾಂಜಲಿಯನ್ನು ನಾಳೆಗೆ ಮುಂದೂಡಿದ್ದೇವೆ. ಈ ದಿವಸ ನಾವು ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತಿದ್ದೇವೆ.

ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆಯಾಗದೇ ಇರುವ ಬಗ್ಗೆ :-

ಶ್ರೀ ವಾಟಾಳ್‌ನಾಗರಾಜ್ (ಚಾಮರಾಜನಗರ) : ಕನ್ನಡ ಭಾಷೆಯನ್ನು ಉಳಿಸಬೇಕೆಂದು ಈ ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆಯಾಗಿಲ್ಲ. ಇದರ ಬಗ್ಗೆ ನಾನು ನಿರಂತರವಾಗಿ ಒಂದೇ ಸಮನೆ ಪ್ರತಿ ಶಾಸನಸಭೆಯಲ್ಲೂ ನಾನು ಕೇಳಿದ್ದೇನೆ, ಒತ್ತಾಯ ಮಾಡಿದ್ದೇನೆ. ಗಡಿನಾಡನ್ನು ಮರೆತಿದ್ದಾರೆ, ಹೊರನಾಡಿನಲ್ಲಿರುವವರ ಬಗ್ಗೆ ಕನಿಷ್ಟಪಕ್ಷ ಜ್ಞಾಪಿಸಿಕೊಳ್ಳತಕ್ಕಂಥ ದೃಷ್ಟಿಯಿಲ್ಲ. ಕನ್ನಡದ ಬಗ್ಗೆ ಅಪಾರವಾದ ಕಳಕಳಿಯಿಲ್ಲ, ಕನ್ನಡ ಆಡಳಿತ ಭಾಷೆಯಾಗಿ ಸ್ಪಷ್ಟವಾಗಿ ಆಗಿಲ್ಲ, ಈ ರಾಜ್ಯದಲ್ಲಿ ಬರೀ ನಾಮಕಾವಸ್ತೆಗೆ ಮಾತನಾಡುತ್ತಿದ್ದೇವೆಯೇ ಹೊರತು ಆಡಳಿತ ಭಾಷೆ ಇಲ್ಲ. ನಾನು ಬಹಳ

ಪ್ರಾಮುಖ್ಯವಾದ್ದು ಎಂದು ಅಧ್ಯಕ್ಷರೆ ತಮ್ಮಲ್ಲಿ ಹೇಳುತ್ತಿದ್ದೇನೆ. ಇದು ಕೊನೆಯ ಅಧಿವೇಶನವಾಗಿರುವುದರಿಂದ ನಾನು ಮೊದಲಿನಿಂದಲೂ ಒಂದೇ ಸಮನೆ ಕೇಳಿದ್ದೇನೆ, ಕನ್ನಡ ಉಳಿಸುವುದರಲ್ಲಿ ಎಲ್ಲಾ ಸರ್ಕಾರಗಳು ವಿಫಲವಾಗಿವೆ.

Mr. Speaker :- Nothing will go on record.

(ಅಧ್ಯಕ್ಷರ ಆದೇಶದ ಮೇರೆಗೆ ರೆಕಾರ್ಡ್ ಮಾಡಲಿಲ್ಲ)

ಅಧ್ಯಕ್ಷರು : ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಮೊದಲನೇ ಸಾಲಿನಲ್ಲಿ ಕುಳಿತಿರತಕ್ಕಂಥ ತಾವೆಲ್ಲರೂ ಹಿರಿಯ ಸದಸ್ಯರಾಗಿದ್ದೀರಿ. ಯಾವುದೇ ಸನ್ನಿವೇಶದಲ್ಲಾದರೂ ಕೂಡ ನಾವು ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳತಕ್ಕಂಥಾದ್ದು ಪ್ರಶ್ನೋತ್ತರ ಮುಗಿದ ನಂತರವೇ. ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ತಾವು ಹೇಳತಕ್ಕಂಥಾದ್ದು ಏನೇ ಇದ್ದರೂ ಕೂಡ ಅದನ್ನು ಪ್ರಶ್ನೋತ್ತರ ಮುಗಿದ ನಂತರ ಪ್ರಸ್ತಾಪ ಮಾಡಲು ಅವಕಾಶಕೊಡುತ್ತೇನೆ. ಈಗ ತಾವು ಹೇಳತಕ್ಕಂಥಾದ್ದು ಸಾಧುವಲ್ಲ. ದಯಮಾಡಿ ನಿಯಮಗಳ ಉಲ್ಲಂಘನೆ ಮಾಡತಕ್ಕಂಥಾದ್ದು ಬೇಡ. ಎಷ್ಟೇ ಗಂಭೀರವಾದ ವಿಚಾರವಾದರೂ ಕೂಡ, ಅದನ್ನು ಒಂದು ಗಂಟೆಯ ನಂತರ ತೆಗೆದುಕೊಂಡರೆ ಅದರ ಗಾಂಭೀರ್ಯವೇನೂ ಹೊರಟು ಹೋಗುವುದಿಲ್ಲ.

(ಗೊಂದಲ)

XXX XXX XXX

ಶ್ರೀ ವಾಟಾಳ್ ನಾಗರಾಜ್ : ನಾನು ಎಷ್ಟು ಬಾರಿ ಒತ್ತಾಯ ಮಾಡಿದ್ದೇನೆ ಈ ಸದನದಲ್ಲಿ. ತಮ್ಮ ತೀರ್ಪನ್ನು ನಾನು ಉಲ್ಲಂಘಿಸಬೇಕು ಎಂದು ಇಲ್ಲ. ಆದರೆ ಪರಿಸ್ಥಿತಿ ನನಗೆ ಅಷ್ಟು ನೋವನ್ನು ಉಂಟು ಮಾಡಿದೆ. ಈ ಸದನದಲ್ಲಿ ಪ್ರಶ್ನೋತ್ತರವನ್ನು ಬದಿಗೊತ್ತಿ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ನಿಮ್ಮ ನೋವಿನಲ್ಲಿ ನನ್ನ ಸಹಭಾಗಿತ್ವ ಹೂಂದಿದೆ. ಈಗ ಪ್ರಶ್ನೋತ್ತರ.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದಲ್ಲಿ ಕನ್ನಡದ ಬಗ್ಗೆ ಸ್ಪಷ್ಟ ನೀತಿ ಇಲ್ಲ. ಇದು ಒಳ್ಳೆಯ ಸೂಚನೆ ಅಲ್ಲ. ಇದು ಸರಿಯಾದ ಮಾರ್ಗ ಅಲ್ಲ. ಗಡಿನಾಡು ಬಗ್ಗೆ ಇವರಿಗೆ ಗಮನ ಇಲ್ಲ, ಹೊರ ನಾಡಿನ ಜನರ ಕಣ್ಣೀರಿನ ಕತೆ ಬಗ್ಗೆ ಇವರ ಗಮನ ಇಲ್ಲ. ನಾನು ತಮ್ಮ ಮೇಲೆ ಬಹಳ ಗೌರವವನ್ನು ಇಟ್ಟುಕೊಂಡಿದ್ದೇನೆ, ಆದರೂ ಸಹ ತಾವು ನನ್ನ ಮೇಲೆ ಬೇಕಾದರೆ ಕ್ರಮ ತೆಗೆದುಕೊಳ್ಳಿ.

ಅಧ್ಯಕ್ಷರು: ಈ ಕಡೆಯ ಅಧಿವೇಶನದಲ್ಲಿ ನಾನು ಏತಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ. ತೆಗೆದುಕೊಳ್ಳುವು ದಾದರೆ ಮೊದಲೇ ತೆಗೆದುಕೊಳ್ಳುತ್ತಿದ್ದೆ.

ಶ್ರೀವಾಟಾಳ್ ನಾಗರಾಜ್ : ಈ ಸದನದಲ್ಲಿ ಯಾರೂ ಸೂಚನೆ ಕೊಡುವುದಕ್ಕೆ ನನ್ನ ವಿರೋಧವಿಲ್ಲ. ಇದು ಸರ್ಕಾರ ಇಂಗ್ಲೀಷಿನಲ್ಲಿ ಪ್ರಕಟಿಸಿರುವ ರಾಜ್ಯಪತ್ರ. ಆಡಳಿತ ಭಾಷೆ ಎಂಬ ಬಗ್ಗೆ ಸರ್ಕಾರಕ್ಕೆ ಚಿಂತೆ ಇಲ್ಲ. ಇದರಲ್ಲಿ ಒಂದು ಅಕ್ಷರ ಕನ್ನಡದಲ್ಲಿದ್ದು ಉಳಿದ ಎಲ್ಲಾ ಅಕ್ಷರಗಳೂ ಇಂಗ್ಲೀಷ್‌ನಲ್ಲಿದೆ.

XXX XXX XXX

(ಈ ಹಂತದಲ್ಲಿ ವಾಟಾಳ್ ನಾಗರಾಜ್‌ರವರು ಆಡಳಿತ ಭಾಷೆಯ ಬಗ್ಗೆ ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ಇಂಗ್ಲೀಷ್‌ನಲ್ಲಿದ್ದ ರಾಜ್ಯಪತ್ರವನ್ನು ಹರಿದು ಸಭಾತ್ಯಾಗ ಮಾಡಿದರು)

XXX ಈ ಗುರ್ತಿನ ನಡವಳಿಕೆಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಪುನಃ ನಡವಳಿಕೆಗಳಲ್ಲಿ ಸೇರಿಸಲಾಗಿದೆ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಒಂದು ಸೂಚನೆ ಕೊಟ್ಟಿದ್ದಾರೆ. ಆದರೂ ಕೂಡ ನಿಯಮಗಳಿಗೆ ಗೌರವ ಕೊಟ್ಟು ಪ್ರಶ್ನೋತ್ತರದ ನಂತರ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಈಗ ದಯಮಾಡಿ ಪ್ರಶ್ನೋತ್ತರ ಮುಗಿಸೋಣ. ಈಗ ಪ್ರಶ್ನೋತ್ತರ. ಇದು ಅಧಿಕೃತ ಕಲಾಪ ಅಲ್ಲ. ಇದು ನಡವಳಿಕೆಗಳಲ್ಲಿ ಬರುವುದಿಲ್ಲ. ಇದುವರೆಗೂ ನಡೆದದ್ದು ಅಫಿಷಿಯಲ್ ಪ್ರೊಸೀಡಿಂಗ್ಸ್‌ನಲ್ಲಿ ಬರುವುದಿಲ್ಲ ಎನ್ನುವ ಮಾತನ್ನು ನಾನು ಹೇಳಿದ್ದೇನೆ. ಈಗ ಇಲ್ಲಿ ಅಫಿಷಿಯಲ್ ಪ್ರೊಸೀಡಿಂಗ್ಸ್ ಅಲ್ಲದೇ ಇರುವ ಘಟನೆಗಳು ಯಾವ್ಯಾವುದು ನಡೆದಿವೆ ಅದ್ಯಾವುದಕ್ಕೂ ಕೂಡ ತಾವು ಮಹತ್ವ ಕೊಡಬಾರದು ಎಂದು ಪತ್ರಿಕಾ ಪ್ರತಿನಿಧಿಗಳಾದ ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಯಾವ ಕಾರಣಕ್ಕೆ ಇಂಥವು ನಡೆಯುತ್ತವೆ ಎಂದು ನಮಗೆ ಗೊತ್ತಾಗಿದೆ. ದಯಮಾಡಿ ನೀವು ನಮ್ಮ ಜೊತೆ ಸಹಕರಿಸಬೇಕು. ಇಲ್ಲಿ ನಡೆದಿರತಕ್ಕಂಥ ಯಾವುದೇ ಘಟನೆಗಳು ನಾಳೆ ಪ್ರಚಾರ ಆಗಕೂಡದು ಎಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ವಿಡಿಯೋಗ್ರಾಫ್ ಮಾಡಿದ್ದಾರೆ. ಅದನ್ನೂ ಕೂಡ ಪಬ್ಲಿಷ್ ಮಾಡಬಾರದು ಎಂದು ತಾವು ಆದೇಶ ಕೊಡಿ. ಇಲ್ಲದಿದ್ದರೆ ಇದೇ ಉತ್ತೇಜನವಾಗುತ್ತದೆ.

MR. SPEAKER : I know the object. It will not be published. It cannot be used for broadcasting.

2 ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ರಾಜ್ಯದಲ್ಲಿ ಪರಿಸರ ಮಾಲಿನ್ಯ ತಡೆಗಟ್ಟುವ ಬಗ್ಗೆ

223(1555) :

ಶ್ರೀ ಎಸ್.ಪಿ. ಮುದ್ದಹನುಮೇ ಗೌಡ (ಕುಣಿಗಲ್) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಮತ್ತು ಪರಿಸರ, ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು ?

ಆ) ಯಾವ ಯಾವ ವಿಧದಲ್ಲಿ ಪರಿಸರ ಮಾಲಿನ್ಯ ಉಂಟಾಗುತ್ತದೆ.

ಶ್ರೀ ಎ.ಬಿ. ಪಾಟೀಲ್ (ಗಣಿ ಮತ್ತು ಭೂ ವಿಜ್ಞಾನ ಮತ್ತು ಪರಿಸರ ಜೀವಿಶಾಸ್ತ್ರ ಸಚಿವರು):

ಅ) ಪರಿಸರ ಇಲಾಖೆಯಡಿ ಬರುವ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲಮಾಲಿನ್ಯ (ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1974 ಮತ್ತು ವಾಯು ಮಾಲಿನ್ಯ (ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1981ಪರಿಸರ ಸಂರಕ್ಷಣೆ ಕಾಯ್ದೆ 1986 ಇದರ ಕೆಲವು ಅನುಬಂಧಗಳನ್ನು ಅನುಷ್ಠಾನಗೊಳಿಸುತ್ತಿದೆ. ಮಂಡಳಿಯು ಈ ಕಾಯ್ದೆಗಳಡಿಯಲ್ಲಿ ಕಲುಷಿತ ನೀರು :ವಾಯು ಮಾಲಿನ್ಯಕಾರಕಗಳ ವಿಸರ್ಜನೆಯ ಗುಣ ಮಟ್ಟವನ್ನು ನಿಗಧಿಪಡಿಸಿ ಮಾಲಿನ್ಯವನ್ನು ನಿಯಂತ್ರಿಸುತ್ತದೆ.

ರಾಜ್ಯದಲ್ಲಿ ಪರಿಸರ ಸಂರಕ್ಷಣೆಗೆ ಕೆಳಕಂಡ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ.

1. ಜಲ ಮತ್ತು ವಾಯು ಮಾಲಿನ್ಯವನ್ನು ನಿಯಂತ್ರಿಸಲು ಜಲ ಹಾಗೂ ವಾಯು ಮಾಲಿನ್ಯ ನಿಯಂತ್ರಣ ಕಾಯ್ದೆ ಹಾಗೂ ಪರಿಸರ ಸಂರಕ್ಷಣೆ ಕಾಯಿದೆ ಅಡಿಯಲ್ಲಿ ಕ್ರಮಗಳನ್ನು ಜರುಗಿಸಲಾಗುತ್ತಿದೆ.
2. ಪರಿಸರ ವಿಮೋಚನೆ ಪತ್ರಗಳನ್ನು ಹೊಸ ಯೋಜನೆಗಳಿಗೆ ನೀಡುವುದು ಅಲ್ಲಿ ಪರಿಸರ ಆಘಾತ ಅಂದಾಜು ಹಾಗೂ ಪರಿಸರ ಸಾರ್ವಜನಿಕ ಸಭೆಗಳನ್ನು ನಡೆಸಲಾಗುತ್ತಿದೆ. ಹೊಸ ಉದ್ದಿಮೆಗಳು ಜಲ ಮತ್ತು ವಾಯು ಮಾಲಿನ್ಯ ನಿಯಂತ್ರಣ ಘಟಕಗಳನ್ನು ಅಳವಡಿಸಿದ ಮೇಲೆ, ಉದ್ದಿಮೆಯನ್ನು